ದಿನಾಂಕಃ 20-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಟಿ.ಆರ್. ವಕೀಲರಿಂದಃ-**

ಸರ್ವೆ ನಂಬರ್ 133 ರ ಆಸ್ತಿ ಯಾರಿಂದ ಯಾರಿಗೆ ಬಂತು ಎಂಬುದು ನನಗೆ ನೆನಪಿಲ್ಲ. ಆದರೆ ನಮ್ಮ ಹಿರಿಯರಿಂದ ಬಂದಿರುತ್ತದೆ. ಸರ್ವೆ ನಂಬರ್ 133 ರ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಈ ಆಸ್ತಿಯು 1967-68 ನೇ ಸಾಲಿನಲ್ಲಿ 7, 8, 10 ಮತ್ತು 11 ನೇ ಪ್ರತಿವಾದಿರವರ ತಂದೆ ಮತ್ತು ತಾತನ ಹೆಸರಿಗೆ ಕ್ರಯದಂತೆ ಎಂಆರ್. ಆಗಿದೆ ಎಂದರೆ ಗೊತ್ತಿಲ್ಲ . ನರಸಿಂಹಪ್ಪ ಮತ್ತು ಹನುಮಂತಪ್ಪರವರು ನನ್ನ ದೊಡ್ಡಪ್ಪನವರಿಗೆ ಜಮೀನನ್ನು ಕ್ರಯಕ್ಕೆ ಬರೆದುಕೊಟ್ಟ ರಿತ್ಯಾ ಅಣ್ಣ ತಮ್ಮಂದಿರು . 1968 ರಂದು ಮಾಡಲಾದ ಕ್ರಯ ಪತ್ರ ಯಾರ ಯಾರ ನಡುವೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 18-08-2020 ರಂದು 1 ರಿಂದ 15 ನೇ ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 133 ರ ಆಸ್ತಿಯನ್ನು 7 ರಿಂದ 10 ನೇ ಪ್ರತಿವಾದಿಯರ ತಂದೆ ಖರೀದಿಸಿದ ಆಸ್ತಿ ಎಂದರೆ ಸರಿ.

ನನ್ನ ತಂದೆ ಗೋವಿಂದಪ್ಪ ಮತ್ತು ಹನುಮಂತಪ್ಪರವರು ಅಣ್ಣ ತಮ್ಮಂದಿರು. ನನ್ನ ತಂದೆಗೆ ಒಟ್ಟು ಆರು ಜನ ಅಣ್ಣ ತಮ್ಮಂದಿರು. ನನ್ನ ತಂದೆಯ ಅಣ್ಣ ತಮ್ಮಂದಿರು

ಯಾವ ವರ್ಷ ಬೇರೆ ಬೇರೆಯಾದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಅಣ್ಣ ತಮ್ಮಂದಿರು ಸುಮಾರು ವರ್ಷಗಳ ಹಿಂದಿನಿಂದಲೂ ಸಹ ಬೇರೆ ಬೇರೆಯಾಗಿ ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸರ್ವೆ ನಂಬರ್ 133 ರ ಆಸ್ತಿಯನ್ನು ಹನುಮಂತಪ್ಪ ಬಿನ್ ಬಂಗಾರ ವೆಂಕಟಪ್ಪರವರು ಖರೀದಿಸಿದ ಆಸ್ತಿಯಾಗಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ತಳವಾರ ಜಮೀನು, ಉತ್ತರಕ್ಕೆ ಯಾರ ಆಸ್ತಿ ಎಂಬುದು ನನಗೆ ನೆನಪಿಲ್ಲ, ದಕ್ಷಿಣಕ್ಕೆ ನನ್ನ ಅಣ್ಣ ಹನುಮಪ್ಪರವರ ಜಮೀನು ಇರುತ್ತದೆ. ಖರೀದಿ ಮಾಡಿದ ಸಮಯದಲ್ಲಿ ಆ ಆಸ್ತಿಯನ್ನು ನಮಗೆ ಬೇಡ ಎಂದು ಹೇಳಿದ ಕಾರಣ ಜಂಟಿಯಾಗಿ ಸೇರಿಸಿರುವುದಿಲ್ಲ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ